ಇರಬಹುದೆಂದು ಕಾಣುತ್ತದೆ. ಅವರು ನಿವೃತ್ತರಾದರೇನೋ ನನಗೆ ಗೊತ್ತಿಲ್ಲ. ಸರ್ಕಾರ ಏಕೆ ಈ ತರಹದ ಧೋರಣೆ ತೋರಿಸುತ್ತದೆಂಬುದು ನನಗರ್ಥವಾಗುತ್ತಿಲ್ಲ. ಇದಕ್ಕೆ ಸನ್ಮಾನ್ಯ ಮಂತ್ರಿಗಳು ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿಳಂಬವಾಗಿದೆ, ನಿಜ. ಆದರೆ, ಸರ್ಕಾರದ ಮೇಲೆ ವಿನಾಕಾರಣ ಆಪಾದನೆ ಮಾಡುವುದು ಅಭ್ಯಾಸವಿದ್ದಂತೆ ಕಾಣುತ್ತದೆ. ಅಲ್ಲಿ ದುರ್ವ್ಯವಹಾರ, ಅವ್ಯವಹಾರವಾಗಿರುವ ಬಗ್ಗೆ ಮಾನ್ಯ ಶಾಸಕರೇನೂ ಪ್ರಸ್ತಾಪಿಸಿರಲಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವರದಿಯ ಆಧಾರದ ಮೇಲೆ ನಾವು ಸಿ.ಓ.ಡಿ. ಯಿಂದ ಎನ್‌ಕ್ವೈರಿ ಮಾಡಿಸಿದ್ದೇವೆ. ಅವರು ಐ.ಎ.ಎಸ್. ಅಧಿಕಾರಿಗಳಾಗಿದ್ದುದರಿಂದ ವರದಿ ಬಂದನಂತರ ವಿಪರೀತ ವಿಳಂಬವಾಗಿ ಆ ಐ.ಎ.ಎಸ್. ಅಧಿಕಾರಿಗಳ ಮೇಲಲ್ಲದೆ ಬೇರೆಯವರ ಮೇಲೋ ಕ್ರಮ ಕೈಗೊಳ್ಳಬೇಕೆಂದು ವ್ಯವಸ್ತೆ ನಡೆದಿತ್ತು. ನಾವು ಹೇಳಿದ್ದೆವು ಅವರು ಐ.ಎ.ಎಸ್. ಅಧಿಕಾರಿಗಳಾಗಿದ್ದರೂ ಕೂಡ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾವವಾಗಿರುವುದರಿಂದ ಈಗ ನಮ್ಮ ಇಲಾಖೆಯ ಶಿಫಾರಸ್ಸಿನ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ಈ ಕಡತ ಹೋಗಿರುವುದರಿಂದ, ಖಂಡಿವಾಗಿಯೂ ಕ್ರಮ ಕೈಗೊಳ್ಳುತ್ತೇವೆ, ಯಾರನ್ನೂ ರಕ್ಷಣೆ ಮಾಡುವ ಉದ್ದೇಶ ನಮಗಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀಎಂ. ಪಿ. ಅಪ್ಪಚ್ಚುರಂಜನ್ : ಅವರು ಹೇಳಿದ್ದು ಒತ್ತಾಯದ ಮೇಲೆ ನಾನು ಮಾಡಿದ್ದೇನೆ ಎಂದು. ಇದು ತಪ್ಪು ಎಂದು ನನ್ನ ಅಭಿಪ್ರಾಯ.

ಶ್ರೀ ಎಂ. ಪಿ. ಪ್ರಕಾಶ್ : ಇದಕ್ಕೆ ನಿಮ್ಮ ಒತ್ತಾಯ ಇಲ್ಲವೇ ಇಲ್ಲ, ನಾವು ಕ್ರಮ ಕೈಗೊಂಡು ನಂತರವೆ ನಿಮಗೆ ಗೊತ್ತಾಗಿರುವುದು.

xviii) ಆಳಂದ ಪಟ್ಟಣದ ಬಿ.ಡಿ.ಓ. ಕ್ವಾರ್ಟರ್ಸ್ ಬಗ್ಗೆ.

ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್ (ಆಳಂದ) : ಮಾನ್ಯ ಅಧ್ಯಕ್ಷರೆ, ಆಳಂದ ಪಟ್ಟಣದಲ್ಲಿ ಬಿ.ಡಿ.ಓ ಕ್ವಾರ್ಟರ್ಸ್ ಕಟ್ಟಿ ಸುಮಾರು 15-20 ವರ್ಷಗಳಾಗಿದ್ದು, ಈಗ ಅಲ್ಲಿಗೆ ಒಬ್ಬ ಖಾಸಗಿ ವ್ಯಕ್ತಿ ಬಂದು ಇದು ತನ್ನ ಸ್ವಂತ ಜಾಗವೆಂದು ಹೇಳಿಕೊಂಡು ಖಾಸಗಿಯವರಿಗೆ ಮಾರಿದ್ದಾರಲ್ಲದೆ ಅಲ್ಲಿ ಖಾಸಗಿ ಮನೆಗಳನ್ನೂ ಕಟ್ಟಿಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಲ್ಲವೇ? ಆ ಜಾಗದ ಬಗ್ಗೆ ತಹಸೀಲ್ದಾರ್ ಹತ್ತಿರವಾಗಲೀ, ಮುನಿಸಿಪಾಲಿಟಿಯಲ್ಲಾಗಲೀ ದಾಖಲೆ ಸಿಗುತ್ತಿಲ್ಲ. ಆದುದರಿಂದ, ಈ ಜಾಗವನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಎಂ. ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಬೀರವಾದಂಥ ವಿಷಯ ಇಲ್ಲಿಯವರೆವಿಗೂ ಈ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಈ ತತ್‌ಕ್ಷಣ ನಾನು ಫ್ಯಾಕ್ಸ್ ಮೂಲಕ ಆ ಕುರಿತ ವಿವರಗಳನ್ನು ತರಿಸಿಕೊಳ್ಳುತ್ತೇನೆ ಮತ್ತು ಖಾಸಗಿಯವರೇನಾದರೂ ಆ ಜಾಗವನ್ನು ಪರಭಾರೆ ಮಾಡುವ ಕ್ರಮಕೈಗೊಂಡಿದ್ದರೆ ಕರ್ತವ್ಯದಲ್ಲಿ ನಿರ್ಲಕ್ಷ್ಯವೆಸಗಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಬಿ.ಡಿ.ಓ. ಕಛೇರಿಗಾಗಿ ಹಾಗೂ ಅವರ ವಾಸಕ್ಕಾಗಿ ಕಟ್ಟಿಸಿರುವ ಆಸ್ತಿಯನ್ನು ಸರ್ಕಾರ ಉಳಿಸಿಕೊಳ್ಳುವುದಕ್ಕೆ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತದೆಂದು ಹೇಳಬಯಸುತ್ತೇನೆ.

xix) ದಿ. ದೇವರಾಜ ಅರಸುರವರ ಪ್ರತಿಮೆಯನ್ನು ಬದಲಾಯಿಸುವ ಬಗ್ಗೆ.

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ಹಿಂದುಳಿದ ವರ್ಗದ ನೇತಾರ ಹಾಗೂ ಚರಿತ್ರೆಯ ಹರಿಕಾರನೆಂದು ದಿವಂಗತ ದೇವರಾಜ ಅರಸುರವರನ್ನು ಕರೆಯುತ್ತಿದ್ದು, ಅವರ ಪುತ್ಥಳಿಯನ್ನು ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಲಾಗಿದೆ. ಆದರೆ, ಪುತ್ಥಳಿ ದಿವಂಗತ ದೇವರಾಜು ಅರಸುರವರನ್ನು ಹೋಲಿಕೆಯಾಗುತ್ತಿಲ್ಲ. ಅವರಲ್ಲಿದ್ದ ಗಾಂಭೀರ್ಯ, ಎದೆಗಾರಿಕೆ, ಮುಂತಾದ ಯಾವುದನ್ನೂ ಕೂಡ ಕಾಣುತ್ತಿಲ್ಲ. ಪುತ್ಥಳಿಯ ಚಿತ್ರ ಒಂದು ತರಹ ಅಸ್ತವ್ಯಸ್ತವಾಗಿದೆ. ಆದುದರಿಂದ, ದಯಮಾಡಿ ಸ್ಥಾಪಿಸಿರುವ ಆ ಪುತ್ಥಳಿಯನ್ನು ಬದಲಾಯಿಸಿ ಅವರ ಹೋಲಿಕೆಯಿರುವ ಬೇರೊಂದು ಪ್ರತಿಮೆಯನ್ನು ಅನಾವರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಮೊನ್ನೆ ದಿವಸ ಹುಣಸೂರು ಕ್ಷೇತ್ರದ ಶಾಸಕರಾದ ವಿಜಯಶಂಕರ್‌ರವು ಕೂಡ ಇದೇ ವಿಚಾರವನ್ನು ಪ್ರಸ್ತಾಪಿಸಿದಾಗ, ಸ್ಥಾಪಿಸಿರುವ ಪ್ರತಿಮೆಯನ್ನು ತೆಗೆದು ದಿವಂಗತ ದೇವರಾಜು ಅರಸುರವರ ಹೋಲಿಕೆಯಿರುವ ಪುತ್ಥಳಿ ಸ್ಥಾಪಿಸಿಬೇಕೆಂದು ಹೇಳಿದ್ದೆವು. ಆದರೆ ದೇವಾರಾಜು ಅರಸುರವರ ಹೆಸರಿನಲ್ಲಿ ಬೇರಾವುದೋ ಪುತ್ಥಳಿಯನ್ನು ಸ್ಥಾಪಿಸಿದ್ದಾರೆ.

ಶ್ರೀ ಸಿ. ಭೈರೇಗೌಡ : ಈ ಹಿಂದೆ ಅನೇಕ ಸಾರಿ ಸಸ್ಯ ಮಿತ್ರರಾದ ವಾಟಾಳ್ ನಾಗರಾಜ್ ರವರೂ ಕೂಡ ಪ್ರಸ್ತಾಪಿಸಿದ್ದಾರೆ. ಅಲ್ಲಿರುವ ಪ್ರತಿಮೆ ದಿವಂಗತ ದೇವರಾಜು ಅರಸುರವರಂತೆ ಹೋಲದೆ ಬೇರೆಯವರು ತರಹ ಕಾಣುತ್ತಿದೆಯೆಂಬ ಮಾತನ್ನು ಹೇಳಿದ್ದಾರೆ.

ಅಧ್ಯಕ್ಷರು: ಸರ್ಕಾರದವರು ದಿವಂಗತ ದೇವರಾಜು ಅರಸುರವರಂತೆ ಹೋಲಿಕೆಯಿರುವ ಪ್ರತಿಮೆ ಸ್ಥಾಪಿಸುವುದಾಗಿ ಮಾತು ಕೊಟ್ಟಿದ್ದಾರೆ.